RegdNo B G155 Sn

(134) 2—

20—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅವಮನೆಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ.ಎಸ್. ಕೃಷ್ಣರಾವ್ 2

ಡಾಕ್ಟರ್ ಅಜಾಗೂಕತೆ

ವನಿಲಾ— 1963 ರಲ್ಲಿ ಒಂದು ಆಸ್ಪತ್ರೆಯಲ್ಲಿ ಒಬ್ಬ ಸ್ತ್ರೀಗೆ ಕಿಬ್ಬೊಟ್ಟೆಯಲ್ಲಿ ಅಪರೇಷನ್ನು ಮಾಡಿದಾಗ ಅಲ್ಲೆ ಟವಲ್ ಬಿಡಲಾಗಿತ್ತು ; ಆ ಸ್ತ್ರೀಗೆ ನೋವುಂಟಾಗಿ ಚಿಕಿತ್ಸೆ ಮಾಡಿದಾಗ ಇದು ಗೊತ್ತಾಯಿತು ; ಆ ಶಸ್ತ್ರಚಿಕಿತ್ಸೆ ಸಡೆಸಿದ ನಾಲ್ಕು ಮಂದಿ ಹೌಸ್ ಸರ್ಜನ್ನರಿಗೆ ತಲಾ 20 ದಿವಸ ಜೈಲು ವಾಸ ವಿಧಿಸಲಾಯಿತು.

★

ಪಾಕಿಸ್ತಾನಿಗಳ ನಾಪು

ಜಮ್ಮು— ಮೊನ್ನೆ 40 ಮಂದಿ ಪಾಕಿಸ್ತಾನ ಸೈನಿಕರು ಕದನವಿರಾಮ ರೇಖೆ ಅತಿಕ್ರಮಿಸಿ ಭಾರತದ ಕಡೆಯೊಳಗೆ ಸುಗ್ಗಿ ನೋಮಾರಾದಲ್ಲಿ ದನಗಳನ್ನು ಪಾಕಿಸ್ತಾನಕ್ಕೆ ತೆಗೆದುಕೊಂಡುಹೋಗಲು ಪ್ರಯತ್ನಿಸಿದಾಗ ಭಾರತ ಕಾವಲುಗಾರ ಪಡೆಯು ಅವರ ಮೇಲೆ ಗುಂಡುಹಾರಿಸಲು ಅವರು ಮುಂದಿ ಮಡಿದರು

★

ಭಾರತಕ್ಕೆ ದಿಗ್ಬಂಧ

ಬೆಂಗಳೂರು— ಪಾಶ್ಚಾತ್ಯ ದೇಶಗಳು ಭಾರತಕ್ಕೆ ನೆರವು ನೀಡಲು ಅತುರವಾಗಿರುವರೆಂದು ಹೇಳಿಕೆಯಾಗಿದೆ

★

ಜುಲ್ಮಾನೆ ಬದಲು ಸಜೆ

ನವದೆಹಲಿ— ಅವಿಭಜಿತ ಕುಟುಂಬದಲ್ಲಿ ಹೆಚ್ಚಿಗೆ ಆಧವಾ ಕಡಮೆ ಆದಾಯವಿರುವ ತಕ್ಸೀರುಗಳಿಗೆ ಕೊಡುವ ಕೇವಲ ಜುಲ್ಮಾನೆ ಬದಲು ಜೈಲುವಾಸ ವಿಧಿಸುವಂತೆ ಶಾಸನದಲ್ಲಿ ತಿದ್ದುಪಡಿ ಮಾಡಲು ಯೋಜಿಸಲಾಗಿದೆ

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಪಂಪಶ್ಯಕೃಷ್ಣಜೋಯಿಸರಿಂದ

21 ಬುಧವಾರ ಸಪ್ತ – ಅಷ್ಟ ಶೇನತಿ

ಭಾರತದ ಮೇಲೆ ದ್ವೇಷ

ಕೊಲಂಬೊ— ತಮಿಳರು, ಕ್ಯಾಥಲಿಕರು, ಸಿಲೋನಿನಲ್ಲಿರುವ ಇತರ ಭಾರತೀಯರ ಮೇಲೆ ಜಾತಿ ಕೋಮು ಮತೀಯ ದ್ವೇಷ ಸಾರುವ ಮತ್ತು ಅವರ ಮೇಲೆ ಕಾರ್ಯಕ್ರಮ ನಡೆಸಲು ಪ್ರೇರೇಪಿಸುವ ಲೇಖನಗಳು ಸಿಂಹಾಳೀ ಭಾಷೆಯ ದಿನ ಮತ್ತು ಕಾಲಿಕ ಪತ್ರಿಕೆಗಳು ಪ್ರಕಟಿಸುತ್ತಿವೆ.

★

ಲಿಯೋಪಿಯಾ ಚುನಾವಣೆ

ವಿಯಾಂಟಿಯೋನು— ಲಿಯೋಪಿಯಾ ರಾಷ್ಟ್ರೀಯ ಸಭೆಗೆ ಮೊನ್ನೆ ಚುನಾವಣೆ ಪ್ರಾರಂಭವಾದಾಗ ಒಸ್ಕೆಯಲ್ಲಿ ವಿರೋಧಿಗಳು ವೈನು ಸ್ಫೋಟಮಾಡಿದರು — ಒಂದು ಬಸ್ಸಿಗೆ ಜಖಂ ಆಯಿತು — ಆಲ್ಲಿಯ ಜನಸಂಖ್ಯೆ 2 ಲಕ್ಷವಿದ್ದು ಕೇವಲ 25 ಸಾವಿರ ಮಂದಿ ಮಾತ್ರ ವೋಟು ಮಾಡಲು ಅರ್ಹರಾಗಿದ್ದಾರೆ !

ಸಮ್ಮೇ ಇರುತ್ತಾರೆ ?

ಬೊಂಬಾಯಿ— ಗೋವಾ ಮಹಾರಾಷ್ಟ್ರದಲ್ಲಿ ವಿಲೀನವಾಗುವ ಬಗ್ಗೆ ಯೋಜಿಸಿರುವ ಚುನಾವಣೆ ಚಳವಳದಲ್ಲಿ ಭಾರತ ರಕ್ಷಣಾಮಂತ್ರಿ ಚವನರು, ಮಹಾರಾಷ್ಟ್ರ ಮುಖ್ಯಮಂತ್ರಿ ನಾಯಿಕರು ಮಹಾರಾಷ್ಟ್ರ ಕಾಂಗ್ರೆಸು ಅಧ್ಯಕ್ಷ ವಿನಾಯಕರಾವ್ ಭಾಗವಹಿಸುವ ಸಂಭವವಿಲ್ಲವೆಂದು ಪ್ರಕಟವಾಗಿದೆ

ಸೀರೆ

ನವದೆಹಲಿ — ಅಮೇರಿಕಾದಲ್ಲಿ ಇಂದು ಭಾರತದ ಸೀರೆಗಳು ಬಹಳ ಜನಪ್ರಿಯವಾಗಿದೆ : ಭಾರತದ ಸೀರೆಗಳನ್ನು ಮತ್ತಷ್ಟು ಜನಪ್ರಿಯಗೊಳಿಸುವ ಉದ್ದೇಶದಿಂದ ' ಸೀರೆಯನ್ನು ಉಡುವುದು ಹೇಗೆ ? ಎಂಬ ಕಾರ್ಯಕ್ರಮವನ್ನು ಟಿಲಿವಿಜನ್ನು ಮೂಲಕ ಪ್ರದರ್ಶಿಸಲಾಗುತ್ತಿದೆ

ಗರ್ಭಪಾತಕ್ಕೆ ನಿಪುಣರ ನಕಾರ

'ಲೂಪ್' ಆನು

ಕುಟುಂಬ ಯೋಜನೆಯಲ್ಲಿ ಮಹಿಳೆಯರು ದೇಹದಲ್ಲಿರಿಸಿಕೊಳ್ಳುವ ಬಗ್ಗೆ ತಮ್ಮ ಅಸಮ್ಮತಿಯನ್ನೂ ಸಂಶಯವನ್ನೂ ಮೊನ್ನೆ ಬೊಂಬಾಯಿನಲ್ಲಿ ನಡೆದ ಅಂತರರಾಷ್ಟ್ರೀಯ ವೈದ್ಯಕೀಯ ಸಮ್ಮೇಳನದಲ್ಲಿ ಅನೇಕ ಡಾಕ್ಟರುಗಳು ವ್ಯಕ್ತಪಡಿಸಿದರು

★

ಗೋವಾ ಸಮಸ್ಯೆ

ಬೆಂಗಳೂರು— ಕಾಂಗ್ರೆಸ್ಸು ಪಾರ್ಲಿಮೆಂಟರಿ ಬೋರ್ಡು ತಾ|| 22 ಮತ್ತು 23 ರಂದು ಗೋವಾ ವಿಷಯವನ್ನು ಕೂಲಂಕಷವಾಗಿ ಪರ್ಯಾಲೋಚಿಸಲಿರುವದೆಂದು ಸ್ಪಷ್ಟವಾಗಿದೆ

★

ಶ್ರೀ ಶೃಂಗೇರಿ ಜಗದ್ಗುರುಗಳು

ಪುದರಾಸು— ಶ್ರೀ ಶೃಂಗೇರಿ ಜಗದ್ಗುರುಗಳು ಈ ವರ್ಷ ನವರಾತ್ರಿಯನ್ನು ಮದರಾಸಿನಲ್ಲಿ ನೆರವೇರಿಸುವರು

ಎನ್ ಜಿ ಓ

ಬೆಂಗಳೂರು— ಎನ್ ಜಿ ಒ ಸಂಘದ ಪ್ರತಿನಿಧಿಗಳು ರಾಜ್ಯಪಾಲರಾದ ಶ್ರೀ ಗಿರಿಯವರನ್ನು ಕಂಡು ತಮ್ಮ ಚಳವಳ ವಿಷಯವನ್ನು ವಿವರಿಸಿದರು

ವೈಸೂರು

ವೈಸೂರು— ವಿಲ್ಲಿನವರು ತಾವು ಲಕ್ಷ್ಮಿ ಮಾಡುವ ಭತ್ತದಲ್ಲಿ ಸುಂಕಾರಕ್ಕೆ ಅರ್ಧ ಕೊಡಬೇಕೆಂಬ ನಿಯಮವು ಸಡಲಿ ಸಲ್ಪಡುವುದಿಲ್ಲವೆಂದು ಆಹಾರ ಮಂತ್ರಿ ಶ್ರೀ ಚತ್ತಿ ಹೇಳಿರುವರು

ಬೊಂದಾಯಿ— ಗರ್ಭವಿಮೋಚನ ಮತ್ತು ಜನನೇಂದ್ರಿಯ ಸಂಬಂಧಿಸಿದ ನಿಪುಣರು ಗರ್ಭಪಾತವನ್ನು ಸಂತತಿ ನಿಯಂತ್ರಣಕ್ಕೆ ಅನುಸರಿಸುವುದನ್ನೂ ಅದಕ್ಕೆ ಶಾಸನಬದ್ಧವಾಗಿ ಮಾಡುವುದನ್ನೂ ನಿರೋಧಿಸಿರುವರು ; ಗರ್ಭಪಾತವು ತೀವ್ರ ಮತ್ತು ಹಿರಿಯ ಅಪರೇಷನ್ನೆಂದೂ, ಜೀವಕ್ಕೆ ಅಪಾಯಕರವೆಂದೂ ಕೆಲವು ಸಾರಿ ಒಂಬತ್ತು ತಿಂಗಳಿಗೆ ಎರಡು ಮೂರು ಸಾರಿ ಅಪರೇಷನ್ನು ಮಾಡಬೇಕಾಗಿದ್ದು ಆರೋಗ್ಯಕ್ಕೆ ಅಪಾಯಕರವೆಂದೂ ಹೇಳಿದರು — ಗರ್ಭಪಾತವು ಭಾರತದಲ್ಲಿ ಶಾಸನ ಸಮ್ಮತವಾದಲ್ಲಿ ಪರಿಣಾಮಕಾರಿ ಸಂತತಿ ನಿಯಂತ್ರಣಕ್ಕೆ ವರ್ಷಕ್ಕೆ ನಾಲ್ಕುವರೆ ಲಕ್ಷ ಅಪರೇಷನ್ನು ಮಾಡಬೇಕಾಗುವುದೆಂದರು ; ಇದಕ್ಕೆ 500 ಮಂದಿ ವಿಶೇಷ ತರಹೇತು ಹೊಂದಿದ ಡಾಕ್ಟರುಗಳು ಅವಶ್ಯವೆಂದರು — ಡಾಕ್ಟರುಗಳಿಗೆ ಗರ್ಭಪಾತದ ಬಗ್ಗೆ ಇಚ್ಛೆ ಇಲ್ಲವೆಂದೂ, ಜೀವವನ್ನು ಉಳಿಸಬೇಕಾಗಿರುವುದೇ ಅವರ ಮಾಡಬಾರದೆಂಬ ದೇವರ 'ಮೋಟೋ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು — ನವೀನ ಗರ್ಭನಿರೋಧ ಸಲಕರಣೆಗಳ ಕುರಿತು ನಡೆದ ಅಂತರರಾಷ್ಟ್ರೀಯ ಸೆಮಿನಾರಿನಲ್ಲಿ ನಡೆದುದು ಈ ವಿಷಯ.

★

ಕಲ್ಲೀಕೋಟೆ— ಮೂರು ಮಂದಿ ಸಹೋದರರು ಶತಾಯುವವರೆಗೂ ಜೊತೆಯಲ್ಲಿದ್ದರು ; ಬೋಪುಂದ ಹತ್ತಿರ ಹತೋಟೆ ವಿಶಾಲವಾದ ದೋಣಿಯಲ್ಲಿದ್ದ ಇವರು ಒಟ್ಟಿಗೆ ಬೊಪುಂದ ನದಿಗೆ ಹಾರಿ ಒಟ್ಟಿಗೆ ಕೊಚ್ಚಿಹೋದರು.

★

ಬೆಂಗಳೂರು— ಗೋವಾ ವಿಚಾರದಲ್ಲಿ ಕಾರ್ಯಾಚರಣೆ ಸಮಿತಿ ಸ್ಥಾಪಿಸಲಿಕ್ಕಿಯಿತು.

ಆಹಾರ ಸಮಸ್ಯೆ

ಶೆ

(ಲೇಖಕರು — ಶ್ರೀ ಅನಂತನಂಜಿಪಪಮ್ಮಂಗ್ಗಾರ್, ಹೊಂಗನೂರು)

✱

(ಮುಂದುವರಿದುದು)

ಹಿಂಜನ ಕಾಲದಲ್ಲಿ ಕೈತರು ವಿರಾಮ ಕಾಲದಲ್ಲಿ ರಾಮಾಯಣ, ಮಹಾಭಾರತ ಮುಂತಾದ ಇತಿಹಾಸಗಳನ್ನು ಓದಿಸಿ ಕೇಳುವುದು, ಯಕ್ಷಗಾನ ನಾಟಕ ಅಭ್ಯಾಸಮಾಡಿ ಆಡುವುದು, ಬೊಂಬೆ ಆಟ ಆಡಿಸುವುದು, ಹರಿಕಥೆ ಮಾಡಿಸುವುದು ಮುಂತಾದ ಸತ್ಕಥಾ ಕಾಲಕ್ಷೇಪದಲ್ಲಿ ಕಳೆಯುತ್ತಿದ್ದರು : ಈಚೆಗೆ ಇವೆಲ್ಲಾ ಲುಪ್ತವಾಗಿವೆ ; ಈಗ ಚಿಕ್ಕವಯಸ್ಸಿನ ಬಾಲಕರಿಂದ ವೃದ್ಧರವರೆಗೆ ಬಹುಜನರು ಜೂಜಾಟದಲ್ಲಿ ಮನರಂಜನೆ ಕಾಣುತ್ತಾರೆ ; ಕೆಲವರು ತಮ್ಮ ಮನೆ ಮಠಗಳನ್ನು ಕಳೆದುಕೊಂಡು ಕೊನೆಗೆ ಕಳ್ಳತನ ಮಾಡುವ ಹಪಾಸಕ್ಕೆ ಬೀಳುತ್ತಾರೆ,

ಈಗ ಕಡ್ಡಾಯ ಶಿಕ್ಷಣ ಜಾರಿಗೆ ಬಂದಿದೆ, ಈಗಿನ ಶಿಕ್ಷಣದಿಂದ ಬಾಲಕರಿಗೆ ಅಥವಾ ಯುವಕರಿಗೆ ಜಾನಪದ ರೀತಿಯ ಜ್ಞಾನವೂ ಉಂಟಾಗುವುದಿಲ್ಲ. ಸೆಕೆಂಡರಿ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿ ಸಾಮಾನ್ಯವಾದ ಒಂದು ಇಂಗ್ಲೀಷು ಪದಕ್ಕೆ ಸ್ಪೆಲ್ಲಿಂಗ್ ಸರಿಯಾಗಿ ಹೇಳಲಾರ, ತಪ್ಪಿಲ್ಲದೇ ಒಂದು ಕನ್ನಡ ಉಕ್ತ ಲೇಖನ ಬರೆಯಲಾರ ; ಬಿ ಎ ಪ್ಯಾಸು ಮಾಡಿರುವ ವಿದ್ಯಾರ್ಥಿ ತಪ್ಪಿಲ್ಲದೇ ಜೈಪುರ ಭಾರತದ ಹಿಂದು ಪದ್ಯಕ್ಕೆ ಅರ್ಥ ಹೇಳಲಾರ, ತಪ್ಪಿಲ್ಲದೇ ಒಂದು ಮನಿಯಾರ್ಡರ್ ಫಾರಂ ಅನ್ನು ಭರ್ತಿ ಮಾಡಲಾರ : ಆದರೆ ಈಗಿನ ವಿದ್ಯಾಭ್ಯಾಸ ಉಂಟುಮಾಡುವ ಒಂದು ಪರಿಣಾಮವೆಂದರೆ ಸೆಕೆಂಡರಿ ಪರೀಕ್ಷೆಯವರೆಗೆ ಓದಿದ ವಿದ್ಯಾರ್ಥಿ ತಮ್ಮ ತಂದೆತಾಯಿಗಳು ಮಾಡುತ್ತಿರುವ ವ್ಯವಸಾಯ ಕೆಲಸವನ್ನೂ ಮಾಡಲಾರ : ಅದನ್ನು ಮಾಡಿದರೆ ಅವಮಾನವೆಂಬ ಭಾವನೆ ಒಂದುಬಿಡುತ್ತದೆ ; ಎಷ್ಟೇ ಕಷ್ಟಪಟ್ಟರೂ ಲಂಡಕೊಟ್ಟಾದರೂ ಅಂಥವರು ಸರಕಾರಿ ಕೆಲಸಕ್ಕೇ ಸೇರಲು ಯತ್ನಿಸುತ್ತಾರೆ : ಈ ರೀತಿ ಕೆಲಸ ದೊರಕದೇ ಇದ್ದಲ್ಲಿ ನಿರುದ್ಯೋಗಿಗಳಾಗಿ ಅಲೆಯುತ್ತಾರೆ : ಇದರಿಂದ ಅನೇಕ ಸಂಸಾರಗಳಲ್ಲಿ ಶಾಶ್ವತ ರೀತಿಯ ಸಮಸ್ಯೆಗಳುಂಟಾಗಿ ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡಲು ತೊಂದರೆ ಉಂಟಾಗುತ್ತದೆ.

[ಮುಂದುವರಿಯುವುದು]

Quality Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

—o—

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕ ವಾಗಿ ಸ್ವೀಕರಿಸಲಾಗುವುದು

ಪುಡಲಾಂಡ್ಸ್ ಮಹಿಮಾನ್ವಿತ 9 ನೇ ವಾರ

ಜಾನ್‌ವರ್ Janwar

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವಿರಾಜ್, ರಾಜೇಂದ್ರನಾಥ್ ಅಭಿನಯಿಸಿರುವ

ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮೆನ್ ಕಲರ್ ಹಿಂದೀ ಚಿತ್ರ

ಅಪೆರ— ಯಶಸ್ವಿ 4 ನೇ ವಾರ

ಮಾಡರ್ನ್ ಥಿಯೇಟರ್ಸ್‌ನವರ 100 ನೇ ಅಮೋಘ ತಮಿಳು ಚಿತ್ರ

ವಲವನಕ್ಕು ವಲವನ್

ನಟವರ್ಗ— ಜೆಮಿನಿ ಗಣೇಶ್, ಸಾವಿತ್ರಿ, ಕಂಗವೇಲು, ಅಶೋಕ್

ಮುಖ್ಯಲಕ್ಷ್ಮಿ ಮನೋರಮ [ಪ್ರತಿ ದಿನ 3 ಆಟಗಳು]

SHAKTI SUDHA

A Superb Tonic

Protect the Cow

ಗೋಸಂರಕ್ಷಣೆ ಮಹತ್ವಪೂರ್ಣವಾದುದೆಂದು ಕಾರ್ಯಗಳು ಹೆಚ್ಚಾಗಿ ನಡೆಯಲಿ

Edited, Printed & Published by Dharma prachara niratha M S Krishna Rao (Proprietor) at the Satyavadi Press Chamarajapuram, Mysore-4